**ದಿನಾಂಕಃ 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಆರ್.ಹೆಚ್. ತೀರ್ಪುಋಣಿದಾರರ ಪರ ವಕೀಲರಿಂದಃ**

ಜೆ.ಡಿ.ಆರ್.ನಂ.1(ಎ)(1) ರವರು ಜೆ.ಡಿ.ಆರ್.ನಂ.1(ಎ)ರವರ ಗಂಡ. ಜೆ.ಡಿ.ಆರ್.ನಂ.1(ಎ)ರವರು ಮರಣ ಹೊಂದಿದ ನಂತರ ಜೆ.ಡಿ.ಆರ್.ನಂ.1(ಎ)(2) ಮತ್ತು ಜೆ.ಡಿ.ಆರ್.ನಂ.1(ಎ)(3) ರವರು ಅಲ್ಪವಯಿಗಳು ಆಗಿದ್ದರಿಂದ ಜೆ.ಡಿ.ಆರ್.ನಂ.1(ಎ)(1) ರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ತರಲಾಗಿದೆ. ಸಿದ್ದಲಿಂಗೇಶ ಮತ್ತು ಪೂಜಾ ಮಾತ್ರ ಪುಷ್ಪಾರವರ ವಾರಸುದಾರರಾಗಿದ್ದು, ಕುಮಾರಸ್ವಾಮಿ ಆಕೆಯ ವಾರಸುದಾರ ಅಲ್ಲ ಎಂದರೆ ಸರಿಯಲ್ಲ. ಮೂಲ ದಾವೆಯ 1 ನೇ ಪ್ರತಿವಾದಿಯಾದ ನೀಲಮ್ಮಳಿಗೆ ಆಸ್ತಿ ಇತ್ತು. ಸಾಕ್ಷಿ ಮುಂದುವರೆದು ಆಕೆ ನಮಗೆ ಬರೆದುಕೊಟ್ಟಿರುತ್ತಾಳೆ ಎಂದು ನುಡಿಯುತ್ತಾಳೆ. ಸದರಿ ನೀಲಮ್ಮಳಿಂದ ಜೆ.ಡಿ.ಆರ್.ನಂ.1(ಎ)(1) ರಿಂದ ಜೆ.ಡಿ.ಆರ್.ನಂ.1(ಎ)(3) ರವರಿಗೆ ಆಸ್ತಿ ಹೋಗಿರುವುದಿಲ್ಲ. ದಾವಾ ಸಂಖ್ಯೆ 94/2004 ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 94/2004 ನ್ನು ಹಣದ ವಸೂಲಾತಿಗಾಗಿ ಹಾಕಿದ್ದೆ. ಸದರಿ ದಾವೆ ನಮ್ಮ ಪರವಾಗಿ ತೀರ್ಮಾನವಾಗಿರುತ್ತದೆ. ಸದರಿ ದಾವೆಯಲ್ಲಿ ಒಂದು ಲಕ್ಷ ಚಿಲ್ಲರ ಕೊಡಬೇಕೆಂದು ಆಗಿರುತ್ತದೆ. ಆರ್.ಎ.ನಂ.10/2016 ನ್ನು ಯಾರು ದಾಖಲೆ ಮಾಡಿದ್ದರು ಎಂದರೆ ಸಾಕ್ಷಿಯು ನಾವೇ ಇದೇ ನ್ಯಾಯಾಲಯದಲ್ಲಿ ದಾಖಲೆ ಮಾಡಿದ್ದೆವು ಎಂದು ನುಡಿಯುತ್ತಾರೆ. ಸದರಿ ಆರ್.ಎ.ನಂ.10/2016 ರಲ್ಲಿ ಕುಮಾರಸ್ವಾಮಿ ನಮಗೆ ಹಣ ಕಟ್ಟುವಂತೆ ಆದೇಶವಾಗಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ.100842/2023 ನ್ನು ದಾಖಲೆ ಮಾಡಿರುತ್ತೇನೆ. ಆರ್.ಎ.ನಂ.10/2016 ಮತ್ತು ಆರ್.ಎಸ್.ಎ.100842/2023 ರ ಬಗ್ಗೆ ನನಗೆ

ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖೆಃ 94/2004,ಆರ್.ಎ.ನಂ.10/2016 ಮತ್ತು ಆರ್.ಎಸ್.ಎ. ನಂ. 100842/2023 ನ್ನು ಯಾಕೆ ಸಲ್ಲಿಸಲಾಗಿತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಕುಮಾರಸ್ವಾಮಿ ಮಹಾಲಕ್ಷ್ಮೀ ಅರ್ಬನ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರ ಆಗಿ ಕೆಲಸ ಮಾಡುತ್ತಿದ್ದು, ಆತನಿಗೆ ಸದರಿ ಕೆಲಸವು ನೀಲಮ್ಮ ಮರಣ ಹೊಂದಿದ ನಂತರ ಆಕೆಯ ಕೆಲಸ ಈತನಿಗೆ ಬಂದಿದ್ದಲ್ಲ, ಆತನಿಗೆ ಸ್ವತಂತ್ರವಾಗಿ ಸದರಿ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ. ಸದರಿ ಕುಮಾರಸ್ವಾಮಿಯ ಬಳಿ ಇರುವಂತಹ ದ್ವಿಚಕ್ರ ವಾಹನ ಆತನು ಖರೀದಿ ಮಾಡಿರುವಂತಹ ವಾಹನ ಎಂದರೆ ಸರಿ. ಸಿದ್ದಲಿಂಗೇಶ ಮತ್ತು ಪೂಜಾ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸಿದ್ದಲಿಂಗೇಶ, ಕುಮಾರಸ್ವಾಮಿ ಮತ್ತು ಪೂಜಾ ಆಗಲಿ ನೀಲಮ್ಮಳಿಂದ ಯಾವುದೇ ಆಸ್ತಿಯನ್ನು ಪಡೆದಿಲ್ಲ, ಹಾಗಾಗಿ ಅವರುಗಳು ಯಾವುದೇ ನೀಲಮ್ಮಳ ಸಾಲವನ್ನು ತೀರಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.